ಶ್ರೀ ಬಿ. ದೊಡ್ಡಬೋರೇಗೌಡ.—ಏಶ್ವೇಶ್ವರಯ್ಯ ನಾಲೆಯು ಅಚ್ಚುಕಟ್ಟಿನಲ್ಲಿ ಒಡೆದುಹೋದ ಕೆರೆಗಳು ಎಷ್ಟಿವೆ ? ಇದುವರೆಗೆ ಎಷ್ಟು ಕೆರೆಗಳನ್ನು ರಿಪೇರಿ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಒಟ್ಟು 141 ಕೆರೆಗಳಿವೆ. 107 ಕೆರೆಗಳ ರಿಪೇರಿ ಈಗಾಗಲೇ ಆಗಿದೆ.

ಶ್ರೀ ಬಿ. ದೊಡ್ಡ ಬೋರೇಗೌಡ.—ಜೀರ್ಣೋದ್ಧಾರವಾಗಿರುವ ಕೆರೆಗಳಲ್ಲಿ ಎಷ್ಟು ನೀರು ನಿಂತು ಕೊಳ್ಳುತ್ತದೆ, ಅದರಿಂದ ಎಷ್ಟು ಎಕರೆಗೆ ನೀರನ್ನು ಸರಬರಾಜು ಮಾಡಬಹುದು ?

ಶ್ರೀ ವೀರೇಂದ್ರ ಪಾಟೀಲ್.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ದೊಡ್ಡ ಬೋರೇಗೌಡ.—ಬೀಚ್ ಆದ ಕೆರೆಗಳನ್ನು ಜೀರ್ಣೋದ್ಧಾರ ಮಾಡುತ್ತೀರಾ ಇಲ್ಲವೆ ಜೀರ್ಣೋದ್ಧಾರ ಮಾಡಿಸದೆ ರೈತರಿಗೆ ಸಾಗುವಳಿಗೆ ಕೊಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಇಂತಹ ಕೆರೆಗಳನ್ನೆರ್ಲಾ ಮೊದಲು ಬ್ರೀಚ್ ಮಾಡಬೇಕೆಂದಿತ್ತು. 1965–66ರಲ್ಲಿ ಬ್ರೀಚ್ ಮಾಡುವುದು ಬೇಡ, ರೆಸ್ಟೋರ್ ಮಾಡಿದರೆ ನೀರು ಸಾಕಷ್ಟು ಬರುತ್ತದೆ, ರೈತರಿಗೆ ಅನುಕೂಲವಾಗುತ್ತದೆಂದು ತಿಳಿದುಕೊಂಡು 107 ಕೆರೆಗಳನ್ನು ತಾತ್ಕಾಲಿಕವಾಗಿ ರೆಸ್ಟೋರ್ ಮಾಡಿದ್ದೇವೆ. ಇದಕ್ಕಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇವೆ. ಒಂದು ಸಬ್-ಡಿವಿಜನ್ ನೇಮಕ ಮಾಡಿದ್ದೇವೆ. ಪ್ರತಿಯೊಂದು ಕೆರೆಗೂ ಎಷ್ಟೆಷ್ಟು ಖರ್ಚಾಗುತ್ತದೆ ಎಂಬುದರ ಬಗ್ಗೆ ಇವರು ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳಿಸುತ್ತಾರೆ.

ಶ್ರೀ ಎಂ. ಮಂಜೇಗೌಡ.—ಕೆರೆಗಳು ಒಡೆದು ಹೋದರೆ ಖಾಯಂ ಆಗಿ ಜೀರ್ಣೋದ್ಧಾರ ಮಾಡುವ ನಿಲುವಾಗಿ ಒಂದೂವರೆ ಕೋಟಿ ರೂಪಾಯಿಗಳ ಯೋಜನೆ ಸರ್ಕಾರದ ಮುಂದೆ ಇತ್ತು. ಆ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈ ಬಗ್ಗೆ ಒಂದು ಸಬ್-ಡಿವಿಜನ್ ಮಾಡಿದ್ದೇವೆ. ಅವರು ಪ್ರತಿಯೊಂದು ಕೆರೆಯ ಜೀರ್ಣೋದ್ಧಾರಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದರ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳಿಸುತ್ತಾರೆ.

———

Levy of punitive tax to Sirigere Village

*Q.—721. Sri M. G. BANAKAR (Byadgi).—

Will the Minister for Home and Labour be pleased to state :—

(*a*) whether it is a fact that they have taken action to levy 'Pundugundaya' to Sirigere Village, Davangere Taluk ;

(*b*) if so, the reason for such levy ?

A.—Sri M. V. RAMA RAO (Minister for Home and Labour).—

(*a*) Punitive tax has been levied.

(*b*) As Sirigere village among others, has been notified as a 'Disturbed area' within the meaning of section 49 of the Mysore Police Act, 1963.

ಶ್ರೀ ಎಂ. ಜಿ. ಬಣಕಾರ್.—ಸಿರಿಗೆರೆ ಗ್ರಾಮದಲ್ಲಿ ಪುಂಡು ಕಂಥಾಯವನ್ನು ಹಾಕಲು ಅಲ್ಲಿಯ ಸೂಪರಿಂಟೆಂಡೆಂಟ್ ಆಫ್ ಪೋಲೀಸಿನವರು ಇಲ್ಲಿ ಯಾವುದೇ ತರಹದ ಗಲಭೆ ಇಲ್ಲ ಎಂದು ಸರ್ಕಾರಕ್ಕೆ ರಿಪೋರ್ಟ್ ಕಳಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† Sri M. V. RAMA RAO.—It is not a fact.

ಶ್ರೀ ಎಂ. ಜಿ. ಬಣಕಾರ್.—ಇದನ್ನು ಗಲಭೆ ಪ್ರದೇಶ ಎಂದು ಸಾರುವುದಕ್ಕೆ ಸಿರಿಗೆರೆಯ ಮಠದ ಅಧ್ಯಕ್ಷರಾದ ತರಳಬಾಳು ಜಗದ್ಗುರುಗಳು ಇದಕ್ಕೆ ಕಾರಣರು ಎಂದು ಮಾಡಿದ್ದೀರಾ ?

Sri M. V. RAMA RAO.—Sir, Several villages have been declared as disturbed area. Sirigere village is one of them. There are a number of persons concerned in subversive activities. Therefore punitive tax is imposed.

ಶ್ರೀ ಎಸ್. ಗೋಪಾಲಗೌಡ.—ಸಿರಿಗೆರೆಯ ಗ್ರಾಮದಲ್ಲಿ ಪುಂಡುಗಂದಾಯ ವಿಧಿಸಬೇಕು ಎಂದು ಪೋಲೀಸಿನವರು ಸರಕಾರಕ್ಕೆ ಸಲ್ಲಿಸಿರುವ ಎಲ್ಲ ವರದಿಗಳನ್ನೂ ಈ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ ?

Sri M. V. RAMA RAO.—No.

Sri K. H. PATIL.—What are the causes influencing the Government to come to the conclusion that it is a dangerous place under Seetion 49 of the Police Act ?

Sri M. V. RAMA RAO.—Not a dangerous place ; What I said was that it was the disturbed area.

ಶ್ರೀ ಎಂ. ಜಿ. ಬಣಕಾರ್.—ಭಾರತ ಸರಕಾರದ ವಾರ್ತಾ ಇಲಾಖೆಯವರು ಸಿರಿಗೆರೆಯು ಒಂದು ಉತ್ತಮವಾದ ಮಾದರಿ ಗ್ರಾಮವಾಗಿದೆ ಎನ್ನುವುದನ್ನು ಒಂದು ಚಲನ ಚಿತ್ರದ ಮೂಲಕ ತೋರಿಸಿ ಎಲ್ಲ ಗ್ರಾಮಗಳಿಗೂ ಇದು ಮಾದರಿಯಾಗಿದೆ ಎಂದು ತೋರಿಸಿರುವುದು ಸರಕಾರದ ನೆನಪಿನಲ್ಲಿ ಇದೆಯೇ ?

Sri M. V. RAMA RAO.—I have no information.

Sri G. DUGGAPPA.—May I know when and since which year Government came to the conclusion that in their opinion Sirigere and some other villages are considered to be disturbed villages ?

Sri M. V. RAMA RAO.—It has been declared as disturbed area in 1966.

Sri C. K. RAJAIAH SHETTY.—May I know the fine collected so far from these villages ?

Sri M. V. RAMA RAO.—No question of fine, but the cost of Police establishment located will be recovered as a punitive tax.

ಶ್ರೀ ಎಂ. ಜಿ. ಬಣಕಾರ್.—ಸುಮಾರು ಇಪ್ಪತ್ತು ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಈ ಕ್ಷೇತ್ರದಲ್ಲಿ ಸುಮಾರು 24 ಹೈಸ್ಕೂಲುಗಳನ್ನು ನಡೆಸುತ್ತ ಇದ್ದಾರೆ ಮತ್ತು ಇಲ್ಲಿ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಎಲ್ಲ ಕೆಲಸಕಾರ್ಯಗಳೂ ಶಾಂತಮಯವಾಗಿ ನಡೆಯುತ್ತಿವೆ. ಇಂತಹವರ ಮೇಲೆ ಪುಂಡು ಕಂದಾಯ ವಿಧಿಸಿರುವುದು ರಾಜಕೀಯ ಉದ್ದೇಶಕ್ಕಾಗಿಯೇ ಎಂದು ಇಲ್ಲ ಚಾರೆಂಜು ಮಾಡಿ ಹೇಳುತ್ತೇನೆ. ಇದಕ್ಕೇನು ಹೇಳುತ್ತೀರಿ ?

Sri M. V. RAMA RAO.—I repudiate that challenge.

Supply of Power to Electrical Irrigation Pumpsets

*Q.—745. Sri B. VENKATARAYAPPA (Sidlaghatta).—

Will the Minister for Public Works be pleased to state :—

(*a*) the horse power of electrical irrigation pumpsets and mills under use in Chikkaballapur Electrical Division ;

(*b*) the horse powers of transformers installed by the Department in the sub-stations of this Division ;